ಎಲ್ಲಾ ಪರಿಕರಗಳು ಸಿದ್ಧಗೊಳ್ಳುತ್ತವೆ. ಯಾರಿಗೂ ಇದು ಬಿದಿರಿನ ಉತ್ಪನ್ನ ಎಂದು ಗುರುತಿಸಲಾಗದು. ಇದು ಬಿದಿರಿನ ಬಹುತ್ವದ ಗುರುತನ್ನೇ ಅಳಿಸುತ್ತದೆ. ಅಂದರೆ ಬದಲಾದ ತಂತ್ರಜ್ಞಾನ, ವಸ್ತು, ಸಂಗತಿಗಳ ಮೂಲ ಚಹರೆಯನ್ನೇ ಬದಲಿಸಿ ರೂಪಾಂತರಿಸುತ್ತಿದೆ. ಹೀಗಿರುವಾಗ 'ಬಿದಿರು ನಾನಾರಿಗಲ್ಲದವಳು?' ಎನ್ನುವ ಶರೀಫರ ಪದದ ಆಶಯ ಬಿದಿರಿನ ಗುರುತನ್ನು ಪತ್ತೆಹಚ್ಚಲಾಗದೇ ಸೋಲುತ್ತದೆ. ಹೀಗೆ ಕೃತಿಯಲ್ಲಿ ಬಳಕೆಯಾದ ಜ್ಞಾನ, ವ್ಯಕ್ತಿ, ವಸ್ತು, ಸಂಗತಿ, ರೂಪಕಗಳು ಬಿಟ್ಟುಕೊಡದ ನಿಗೂಢ ಅರ್ಥಗಳನ್ನು ಒಡಲಲ್ಲಿ ಇರಿಸಿಕೊಂಡಂತೆ ಭಾಸವಾಗುತ್ತದೆ.

ಮನುಷ್ಯ ಏಕರೂಪೀತನದಲ್ಲಿ ಬಹುಕಾಲ ಜೀವಿಸಲಾರ. ಈ ಸತ್ಯದ ಅರಿವಿರುವ ಪ್ರಭುತ್ವ, ಧರ್ಮ, ಕ್ರೋನಿ ಕ್ಯಾಪಿಟಲಿಸ್ಟುಗಳ ಆರ್ಟಿಫಿಷಲ್ ಇಂಟೆಲಿಜೆನ್ಸ್‌ನಂತಹ (AI) ಆಧುನಿಕ ತಂತ್ರಜ್ಞಾನ ತಮಗೆ ಬೇಕಾದಂತೆ ಬಹುತ್ವವನ್ನು ನಿರ್ವಹಿಸುವ ಕಲೆಯನ್ನರಿತಿವೆ. ಸಮುದಾಯಗಳೆದುರು ಕಾಲ್ಪನಿಕ ಪರ್ಯಾಯ ಬಹುತ್ವವನ್ನು ಆಕರ್ಷಕವಾಗಿ ಮುಂದಿಟ್ಟು ಮೋಸಗೊಳಿಸಲಾಗುತ್ತಿದೆ. ಸಂಕೀರ್ಣ ಬಹುತ್ವವನ್ನು ಸರಳ ಬಹುತ್ವವನ್ನಾಗಿಯೂ, ತ್ರಾಣದಾಯಕ ಬಹುತ್ವವನ್ನು ಅಶಕ್ತ ಬಹುತ್ವವನ್ನಾಗಿಯೂ, ಸಹಿಷ್ಣುತೆಯ ಬಹುತ್ವವನ್ನು ಅಸಹಿಷ್ಣತೆಯ ಬಹುತ್ವ ವನ್ನಾಗಿಯೂ ಅದಲು ಬದಲುಗೊಳಿಸಲಾಗುತ್ತಿದೆ. ಈ ದಿಸೆಯಲ್ಲಿ ಚರ್ಚೆಯು ಸಾಗುವುದಕ್ಕೆ ಈ ಪುಸ್ತಕವು ಪ್ರೇರಣೆಯಾಗಿಯೂ ಒದಗುತ್ತದೆ. ಬಹುತ್ವವನ್ನು ತಾತ್ವಿಕವಾಗಿ ವೈವಿಧ್ಯಗಳ ಸಹಬಾಳ್ವೆ, ಪರಸ್ಪರ ಬೆರೆಯುವಿಕೆ, ಸಂಬಂಧ ಸ್ಥಾಪನೆ, ರೂಪಾಂತರ ಮತ್ತು ಹೊಸ ಸೃಷ್ಟಿ ಎಂಬ ಐದು ಹಂತಗಳಲ್ಲಿ ಗುರುತಿಸುತ್ತಾರೆ. ಈ ಹಂತಗಳ ಕೊಡು ಕೊಳೆ ಮತ್ತು ವೈರುಧ್ಯಗಳನ್ನೂ ಒಳಗೊಂಡಂತೆ ವಿಸ್ತಾರವಾಗಿ ಚರ್ಚಿಸಿದ್ದಾರೆ. ಕಾಲಾಂತರದಲ್ಲಿ ನಾವು ಪರಿಭಾವಿಸಿದ ಬಹುತ್ವದ ಗ್ರಹಿಕೆಗಳು ಎದುರು-ಬದುರಾಗುವ ನೆಲೆಯೊಂದಿದೆ. ಈ ಸೂಕ್ಷ್ಮ ಎಳೆ ಒಟ್ಟು ತಿಳಿವಿನಲ್ಲಿ ಹಾದುಹೋಗಿದೆ. ಇಡಿಯಾದ ಬಹುತ್ವದ ಚರ್ಚೆಯಲ್ಲಿ ಗಂಭೀರ ಎಂದು ಗುರುತಿಸಲ್ಪಟ್ಟ ಲೇಖಕ-ಲೇಖಕಿಯರು, ಕೃತಿ, ವಿದ್ಯಮಾನಗಳನ್ನು ಹೆಚ್ಚು ಹೆಚ್ಚು ತರಲಾಗಿದೆ. ಪಾಪ್ಯುಲರ್ ಕಲ್ಚರ್‌ನ ಭಾಗವಾದ ಜನಪ್ರಿಯ ಎನ್ನಬಹುದಾದ ಲೇಖಕ-ಲೇಖಕಿಯರು, ಸಿನಿಮಾ, ಸಂಗೀತ, ಆಚರಣೆ, ವ್ಯಕ್ತಿ, ಸಂಸ್ಕೃತಿಗಳ ಒಳಗೊಳ್ಳುವಿಕೆ ಬಡವಾಗಿದೆ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಹಿರಿಯ ತಲೆಮಾರಿನ ಹಾಜರಿಯೂ, ವ್ಯಾಪಕವಾಗಿ ಬರಹದಲ್ಲಿ ತೊಡಗಿಕೊಂಡ ಹೊಸ ತಲೆಮಾರಿನ ಗೈರು ಹಾಜರಿಯೂ ಎದ್ದು ಕಾಣುತ್ತದೆ. ಇದು ಅತಿವ್ಯಾಪ್ತಿಯ ನಿರೀಕ್ಷೆಯಂತೆ ಕಂಡರೂ ಬಹುತ್ವದ ಸಮಕಾಲೀನ ಚರ್ಚೆಗೆ ಅಗತ್ಯವಿತ್ತು.

ಈ ಕೃತಿ ಬಹುತ್ವವೆಂಬ ಪರಿಕಲ್ಪನೆಯನ್ನು ಬಹು ನೆಲೆಗಳಲ್ಲಿ ವಿಸ್ತರಿಸಿದ ಪುಸ್ತಕ. ಸೂಫಿ, ನಾಥ, ಕೌಳ, ಶಾಕ್ತ, ಶೈವ, ವೈಷ್ಣವ ಮೊದಲಾದ ಆದಿಮ ಪಂಥಗಳನ್ನು ಮತ್ತೆ ಮತ್ತೆ ಉಲ್ಲೇಖಿಸಲಾಗಿದೆ. ಓದುವವರಿಗೆ ಈ ಪಂಥಗಳ ಪ್ರಾಥಮಿಕ ತಿಳಿವಿದ್ದಲ್ಲಿ ಇಲ್ಲಿ ನಡೆಸಿದ ವಿಶ್ಲೇಷಣೆಯ ಒಳನೋಟಗಳು ಹೊಸದಿಕ್ಕನ್ನೇ ಕೊಡಬಹುದು. ಇಂಥ ವಿಚಾರಗಳಿಗೆ ಪೂರಕವಾದ ಟಿಪ್ಪಣಿಯೊಂದಿದ್ದರೆ ಓದು ಸುಲಭವಾಗಬಹುದಿತ್ತು ಎಂದೂ ಅನಿಸುತ್ತದೆ. ಅಂತೆಯೇ ಪುಸ್ತಕ ಓದುವಾಗಲೇ ವಿಸ್ತರಿಸಿಕೊಳ್ಳಬಹುದಾದ ಅಂತರ್ಜಾಲದ ಕೊಂಡಿಗಳು ಲಭ್ಯವಾದಲ್ಲಿ ಓದಿನ ವಿಸ್ತರಣೆ ಬಹುಸುಲಭವಾಗುವುದು.

ಕಡೆಯದಾಗಿ ಕಾಣ್ಕೆ ಭಾಗದಲ್ಲಿ ಬಹುತ್ವದ ಎಲ್ಲಾ ಚರ್ಚೆಯ ಎಳೆಗಳನ್ನು ತಂದು 'ಭಾರತ ಸಂವಿಧಾನ'ದ ಜತೆ ಬೆಸೆಯುತ್ತಾರೆ. ಇದು ದೇಶದ ಎಲ್ಲಾ ದಮನಿತರಿಗೆ ಸಂವಿಧಾನವೊಂದೇ ಆಸರೆ ಎನ್ನುವುದಕ್ಕೆ ಸಾಂಕೇತಿಕವಾಗಿ ಸುಂದರವಾಗಿ ಮೂಡಿ ಬಂದಿದೆ. ಅಂದರೆ ಸಂವಿಧಾನವು 'ವಿ ದಿ ಪೀಪಲ್' ಎಂದು ಬಹುವಚನದಲ್ಲಿ ಆರಂಭವಾಗುತ್ತದೆ. ಅದರ ಪೀಠಿಕೆಯಲ್ಲಿರುವ ಸಮಾನತೆ, ಸ್ವಾತಂತ್ರ್ಯ, ಬಂಧುತ್ವ ಎಂಬ ಮೌಲ್ಯಗಳು, ಪ್ರಾಣವಾಯು ಶ್ವಾಸಕೋಶ-ದೇಹಗಳಂತೆ ಪರಸ್ಪರ ಬೆಸೆದುಕೊಂಡಿವೆ' ಎನ್ನುತ್ತಾ ಬಹುತ್ವದ ಉಸಿರು ಸಂವಿಧಾನದಲ್ಲಿದೆ ಎನ್ನುವಲ್ಲಿಗೆ ನಿಲ್ಲುತ್ತಾರೆ. ತರತಮ ರಹಿತ ಸಮತೆಯ ಬಹುತ್ವದ ರಕ್ಷಣೆ ಏಕಕಾಲಕ್ಕೆ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ ಕನಸಿನ ಸಂವಿಧಾನದ ರಕ್ಷಣೆಯೂ ಆಗಿದೆ ಎನ್ನುವ ದನಿ ಕೃತಿಯ ಒಳಗಿನಿಂದಲೇ ಕೇಳಿಸುತ್ತದೆ.

●